# ಮಂಗಳೂರು ವಿಶ್ವವಿದ್ಯಾನಿಲಯ

**ದಿನಾಂಕ 17.12.2020ರಂದು ಪೂರ್ವಾಹ್ನ ಗಂಟೆ 10:00ಕ್ಕೆ ಸರಿಯಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ಸೌಧದ ಸಿಂಡಿಕೇಟ್ ಸಭಾಂಗಣದಲ್ಲಿ ನಡೆದ ಸಿಂಡಿಕೇಟಿನ 2020ನೇ ಸಾಲಿನ ಎಂಟನೆಯ ಸಾಮಾನ್ಯ ಸಭೆಯ ನಡವಳಿಗಳು.**

**ಉಪಸ್ಥಿತರು**

**ಅನುಪಸ್ಥಿತರು**

**ಪ್ರಾರಂಭಿಕ**

ಪ್ರಾರಂಭದಲ್ಲಿ ಕುಲಸಚಿವರು ಸಭಾಧ್ಯಕ್ಷರಾದ ಮಾನ್ಯ ಕುಲಪತಿಗಳು ಹಾಗೂ ಎಲ್ಲಾ ಸಿಂಡಿಕೇಟು ಸದಸ್ಯರುಗಳನ್ನು ಸಭೆಗೆ ಸ್ವಾಗತಿಸಿದರು.

## ➢ ಸ್ವಾಗತ

I. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000ದ ಪ್ರಕರಣ 28 (1) (ಎಫ್) ರಂತೆ ಮಂಗಳೂರು ವಿಶ್ವವಿದ್ಯಾನಿಲಯದ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರ ಜೇಷ್ಠತೆ ಹಾಗೂ ಸರದಿಯ ಮೇರೆಗೆ ಸಿಂಡಿಕೇಟು ಸದಸ್ಯರುಗಳಾಗಿ ಮಾನ್ಯ ಕುಲಪತಿಗಳಿಂದ ನಾಮನಿರ್ದೇಶನಗೊಂಡಿರುವ ಈ ಕೆಳಗಿನ ಪ್ರಾಂಶುಪಾಲರುಗಳನ್ನು ಮಾನ್ಯ ಕುಲಸಚಿವರು ಸಭೆಗೆ ಸ್ವಾಗತಿಸಿದರು.

1. ಶ್ರೀಮತಿ ರಾಧಿಕಾ ಪೈ ಟಿ., ಪ್ರಾಂಶುಪಾಲರು, ಮಾಧವ ಪೈ ಮೆಮೋರಿಯಲ್ ಕಾಲೇಜ್, ವಿದ್ಯಾನಗರ, ಮಣಿಪಾಲ – 576 104
2. ಡಾ. ಎನ್. ಪಿ. ನಾರಾಯಣ ಶೆಟ್ಟಿ, ಪ್ರಾಂಶುಪಾಲರು, ಭಂಡಾರ್‌ಕಾರ್ಸ್ ಕಾಲೇಜು, ಕುಂದಾಪುರ –576201

## ➢ ಕೃತಜ್ಞತೆ

I. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000ದ ಪ್ರಕರಣ 28 (1) (ಎಫ್) ರಂತೆ ಮಂಗಳೂರು ವಿಶ್ವವಿದ್ಯಾನಿಲಯದ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರ ಜೇಷ್ಠತೆ ಹಾಗೂ ಸರದಿಯ ಮೇರೆಗೆ ಸಿಂಡಿಕೇಟು ಸದಸ್ಯರಾಗಿ ಮಾನ್ಯ ಕುಲಪತಿಗಳಿಂದ ನಾಮನಿರ್ದೇಶನಗೊಂಡಿದ್ದ ಈ ಕೆಳಗಿನ ಪ್ರಾಂಶುಪಾಲರುಗಳ ಸಿಂಡಿಕೇಟು ಸದಸ್ಯತ್ವದ ಅವಧಿಯು ಕೊನೆಗೊಂಡಿರುವುದರಿಂದ ಸದರಿಯವರುಗಳನ್ನು ಸದಸ್ಯತ್ವದಿಂದ ಮುಕ್ತಗೊಳಿಸಲಾಗಿರುತ್ತದೆ.

1. ಶ್ರೀಮತಿ ಕಸ್ತೂರಿ ಜೆ. ಶೆಟ್ಟಿ, ಪ್ರಾಂಶುಪಾಲರು, ಶ್ರೀದೇವಿ ಕಾಲೇಜ್ ಆಫ್ ಫ್ಯಾಶನ್ ಡಿಸ್ಯೆನ್, ಬಲ್ಲಾಳ್‌ಬಾಗ್, ಮಂಗಳೂರು – 575 003
2. ಶ್ರೀ ಚಂದ್ರಶೇಖರ ದೀಕ್ಷಿತ್ ಹೆಚ್. ಪ್ರಾಂಶುಪಾಲರು, ಶ್ರೀ ಮಹಾವೀರ ಕಾಲೇಜು, ಮೂಡಬಿದಿರೆ–574197

ಇವರೆಲ್ಲರೂ ತಮ್ಮ ಸಿಂಡಿಕೇಟು ಸದಸ್ಯತ್ವದ ಅವಧಿಯಲ್ಲಿ ವಿಶ್ವವಿದ್ಯಾನಿಲಯದ ಸರ್ವತೋಮುಖ ಪ್ರಗತಿಗೆ ಹಾಗೂ ಉನ್ನತ ಶಿಕ್ಷಣದ ಸರ್ವಾಂಗೀಣ ಅಭಿವೃದ್ಧಿಗೆ ಪೂರಕ ಸಲಹೆ ಮತ್ತು ಸಹಕಾರಗಳನ್ನು ನೀಡಿರುವುದಕ್ಕಾಗಿ

ಸಿಂಡಿಕೇಟು ಹಾಗೂ ಮಂಗಳೂರು ವಿಶ್ವವಿದ್ಯಾನಿಲಯದ ಪರವಾಗಿ ಕೃತಜ್ಞತಾಪೂರ್ವಕ ಅಭಿನಂದನೆಗಳನ್ನು ಸಲ್ಲಿಸಲಾಯಿತು.

## ಪ್ರಾಸ್ತಾವಿಕ

ಮಾನ್ಯ ಕುಲಪತಿಗಳು ಪ್ರಾಸ್ತಾವಿಕವಾಗಿ ಮಾತನಾಡುತ್ತಾ ಈ ಕೆಳಗಿನ ವಿಷಯಗಳನ್ನು ಸಭೆಗೆ ತಿಳಿಸಿದರು.

1. ಮಂಗಳೂರು ವಿಶ್ವವಿದ್ಯಾನಿಲಯದ 41 ನೇ ಸಂಸ್ಥಾಪನಾ ದಿನಾಚರಣೆಯನ್ನು ದಿನಾಂಕ 19.12.2020 ರಂದು ವಿಶ್ವವಿದ್ಯಾನಿಲಯದಲ್ಲಿ ಹಮ್ಮಿಕೊಂಡಿರುವ ವಿಷಯವನ್ನು ತಿಳಿಸುತ್ತಾ ಸದರಿ ದಿನದಂದು ಮಂಗಳೂರು ವಿಶ್ವವಿದ್ಯಾನಿಲಯದ ಮಾನ್ಯ ಸಿಂಡಿಕೇಟು ಸದಸ್ಯರಾದ ಪ್ರೊ. ಕರುಣಾಕರ್ ಎ. ಕೋಟೆಗಾರ್ ಇವರು ರಾಷ್ಟ್ರೀಯ ಶಿಕ್ಷಣ ನೀತಿ – 2020 ರ ಬಗ್ಗೆ ವೀಡಿಯೋ ಮಾಲಿಕೆಯನ್ನು ಕನ್ನಡದಲ್ಲಿ ತಯಾರಿಸಿದ್ದು, ಅವುಗಳನ್ನು ಮಾನ್ಯ ಉಪ ಮುಖ್ಯಮಂತ್ರಿಗಳು online ಮೂಲಕ ಬಿಡುಗಡೆಗೊಳಿಸಲಿರುವ ವಿಷಯವನ್ನು ಸಭೆಗೆ ತಿಳಿಸಿದರು.
2. ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಸ್ವಾಮಿ ವಿವೇಕಾನಂದ ಅಧ್ಯಯನ ಕೇಂದ್ರದ ಸ್ಥಾಪನೆಯ ಉದ್ಘಾಟನಾ ಸಮಾರಂಭವನ್ನು ದಿನಾಂಕ 12.01.2021 (ನ್ಯಾಷನಲ್ ಯೂತ್ ಡೇ)ರಂದು ಏರ್ಪಡಿಸಲಾಗುವುದೆಂದು ತಿಳಿಸಿದರು.
3. World Green Metric ಸಮೀಕ್ಷೆಯಲ್ಲಿ ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ವಿಶ್ವದಲ್ಲಿ 139ನೇ ರ್‍ಯಾಂಕ್ ಮತ್ತು ಭಾರತದಲ್ಲಿ ಪ್ರಥಮ ಸ್ಥಾನ ಬಂದಿರುವ ವಿಷಯವು ವಿಶ್ವವಿದ್ಯಾನಿಲಯಕ್ಕೆ ಹೆಮ್ಮೆ ತಂದಿರುವುದಾಗಿ ಸಭೆಗೆ ತಿಳಿಸಿದರು.
4. ಮಂಗಳೂರು ವಿಶ್ವವಿದ್ಯಾನಿಲಯದ 39ನೇ ವಾರ್ಷಿಕ ಘಟಿಕೋತ್ಸವವನ್ನು ಫೆಬ್ರವರಿ 2021ರಲ್ಲಿ ನಡೆಸಲು ಕ್ರಮಕೈಗೊಳ್ಳುವುದಾಗಿ ತಿಳಿಸಿದರು.
5. ಜನವರಿ, ಫೆಬ್ರವರಿ ಅಥವಾ ಮಾರ್ಚ್ 2021ರಲ್ಲಿ ನ್ಯಾಕ್ ಸಮಿತಿಯು ವಿಶ್ವವಿದ್ಯಾನಿಲಯಕ್ಕೆ ಭೇಟಿ ನೀಡುವ ಸಾಧ್ಯತೆಯ ವಿಷಯವನ್ನು ಸಭೆಗೆ ತಿಳಿಸಿದರು.
6. ಮಂಗಳೂರು ವಿಶ್ವವಿದ್ಯಾನಿಲಯದ ಶೈಕ್ಷಣಿಕ ವೇಳಾಪಟ್ಟಿಗೆ ಯಾವುದೇ ರೀತಿಯ ತೊಂದರೆ ಆಗದ ರೀತಿಯಲ್ಲಿ ವಿಶ್ವವಿದ್ಯಾನಿಲಯದ ಸಂಯೋಜಿತ ಕಾಲೇಜುಗಳಿಗೆ ಈ ಹಿಂದಿನ ಪದ್ಧತಿಯಂತೆ ಕ್ರಿಸ್‌ಮಸ್ ರಜಾದಿನಗಳನ್ನು ದಿನಾಂಕ 26.12.2020 ರಿಂದ ದಿನಾಂಕ 31.12.2020ರವರೆಗೆ ನೀಡಿರುವ ವಿಷಯವನ್ನು ಸಭೆಯ ಗಮನಕ್ಕೆ ತಂದರು.
7. ಮಂಗಳೂರು ವಿಶ್ವವಿದ್ಯಾನಿಲಯದ 2021ನೇ ಸಾಲಿನ ಡೈರಿ ಮತ್ತು ಕ್ಯಾಲೆಂಡರ್‌ಗಳು ಸಿದ್ಧವಾಗಿರುವ ವಿಷಯವನ್ನು ಮಾನ್ಯ ಸದಸ್ಯರುಗಳ ಗಮನಕ್ಕೆ ತಂದರು. ಈ ಸಾಲಿನ ಡೈರಿ ಮತ್ತು ಕ್ಯಾಲೆಂಡರ್‌ಗಳನ್ನು ತಯಾರಿಸುವಲ್ಲಿ ಕುಲಸಚಿವರು ಮತ್ತು ಸಂಬಂಧಿತ ಸಿಬ್ಬಂದಿ ವರ್ಗದವರು ಮುತುವರ್ಜಿ ವಹಿಸಿ ಅತ್ಯಂತ ಕಡಿಮೆ ವೆಚ್ಚದಲ್ಲಿ ಮತ್ತು ಕ್ಲಪ್ತ ಸಮಯದಲ್ಲಿ ಸುಂದರವಾಗಿ ತಯಾರು ಮಾಡಿರುವುದಕ್ಕೆ ಶ್ಲಾಘನೆ ವ್ಯಕ್ತಪಡಿಸಿದರು.

## I. ನಡವಳಿಗಳ ದೃಢೀಕರಣ

ದಿನಾಂಕ 12.11.2020ರಂದು ನಡೆದ 2020ನೇ ಸಾಲಿನ ಏಳನೇ **ಸಾಮಾನ್ಯ ಸಭೆಯ** ನಡವಳಿಯನ್ನು ಈ ಕೆಳಗಿನಂತೆ ತಿದ್ದುಪಡಿ ಮಾಡಿ ದೃಢೀಕರಿಸಲಾಯಿತು.

1. ಇತರ ವಿಷಯಗಳ ಕ್ರಮ ಸಂಖ್ಯೆ 1ರಲ್ಲಿ ಈ ಕೆಳಗಿನ ವಿಷಯವನ್ನು ಸೇರ್ಪಡೆಗೊಳಿಸುವುದು.
   "ವಿಶ್ವವಿದ್ಯಾನಿಲಯದಲ್ಲಿ ಅಳವಡಿಸಲಾಗಿರುವ ಕ್ಯಾಂಪಸ್ ಮ್ಯಾನೇಜ್‌ಮೆಂಟ್ ಸಿಸ್ಟಮ್‌ನಲ್ಲಿ HRMS ಮತ್ತು ಪರೀಕ್ಷಾ ವ್ಯವಸ್ಥೆಯ ಆಟೋಮೇಷನ್‌ನ್ನು ಕೈಬಿಡಲು ಸಿಂಡಿಕೇಟು ನಿರ್ಣಯಿಸಿತು."

ಸದರಿ ಸಮಿತಿಗೆ ಅಧ್ಯಕ್ಷರಾಗಿರುವ ಪ್ರೊ. ಕರುಣಾಕರ್ ಎ. ಕೋಟೆಗಾರ್ ಇವರಿಗೆ ಸಮಯದ ಅಭಾವದಿಂದ ಮತ್ತು ವೈಯಕ್ತಿಕ ಸಮಸ್ಯೆಗಳಿಂದ ಅಧ್ಯಕ್ಷನಾಗಿ ಮುಂದುವರಿಯಲು ಅಸಾಧ್ಯವಾಗಿರುವ ವಿಷಯವನ್ನು ಸಭೆಗೆ ಮಂಡಿಸಿದರು. ಸಿಂಡಿಕೇಟು ಸಭೆಯು ಸರ್ವಾನುಮತದಿಂದ ಸದರಿಯವರ ಮನವಿಯನ್ನು ಪರಿಗಣಿಸಿತು. ಅಗತ್ಯ ಸಂದರ್ಭಗಳಲ್ಲಿ ಸದರಿ ಸಮಿತಿಯ ಸಭೆಗಳಿಗೆ ವಿಶೇಷ ಆಹ್ವಾನಿತರ ನೆಲೆಯಲ್ಲಿ ಪ್ರೊ. ಕರುಣಾಕರ್ ಎ. ಕೋಟೆಗಾರ್ ಇವರನ್ನು ಆಹ್ವಾನಿಸಬಹುದೆಂಬುದಾಗಿಯೂ ಸಿಂಡಿಕೇಟು ನಿರ್ಣಯಿಸಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ ಸಾ.ಸ.7:02(2020)

**ವಿಷಯ:** ಪಿ.ಹೆಚ್.ಡಿ ಹಾಗೂ ಅಂತಾರಾಷ್ಟ್ರೀಯ ವಿದ್ಯಾರ್ಥಿಗಳಿಗೆ ಸಂಬಂಧಪಟ್ಟ ಶುಲ್ಕಗಳ ಬಗ್ಗೆ.

**ತಿದ್ದುಪಡಿ ನಿರ್ಣಯ:** ಅನುಮೋದಿಸಲಾಯಿತು. ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗ ಮಾಡುತ್ತಿರುವ ವಿದೇಶೀ ವಿದ್ಯಾರ್ಥಿಗಳು ಶೈಕ್ಷಣಿಕ ವರ್ಷ 2020–21ನೇ ಸಾಲಿನ ಶುಲ್ಕಗಳನ್ನು ಈಗಾಗಲೇ ಭರಿಸಿದ್ದು, ಈ ಹಂತದಲ್ಲಿ ವಿಶ್ವವಿದ್ಯಾನಿಲಯದ ಆರ್ಥಿಕ ಸ್ಥಿತಿಗತಿಯನ್ನು ಪರಿಗಣಿಸಿ, ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ ವಿದೇಶೀ ವಿದ್ಯಾರ್ಥಿಗಳ ಶುಲ್ಕಗಳಲ್ಲಿ ಯಾವುದೇ ಬದಲಾವಣೆ ತರುವ ಅಗತ್ಯವಿಲ್ಲವೆಂದು ಸಿಂಡಿಕೇಟು ಮನಗಂಡಿರುತ್ತದೆ. ಆದುದರಿಂದ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗ ಮಾಡುತ್ತಿರುವ ವಿದೇಶೀ ವಿದ್ಯಾರ್ಥಿಗಳಿಗೆ ಈ ಹಿಂದೆ ನಿಗದಿಪಡಿಸಲಾಗಿದ್ದ ಶುಲ್ಕಗಳನ್ನು ಶೈಕ್ಷಣಿಕ ವರ್ಷ 2020–21ನೇ ಸಾಲಿಗೂ ಮುಂದುವರಿಸುವಂತೆ ಸಿಂಡಿಕೇಟು ನಿರ್ಣಯಿಸಿತು.

## II. ಅನುಸರಣಾ ವರದಿಯ ಅನುಮೋದನೆ

ದಿನಾಂಕ 28.10.2020ರಂದು ನಡೆದ **ಸಿಂಡಿಕೇಟಿನ 2020ನೇ ಸಾಲಿನ ಆರನೇ ಸಾಮಾನ್ಯ ಸಭೆಯ** ನಿರ್ಣಯದ ಮೇಲೆ ತೆಗೆದುಕೊಂಡ ಕ್ರಮದ ಅನುಸರಣಾ ವರದಿಯ ಅನುಮೋದನೆ.

– **ಅನುಮೋದಿಸಲಾಯಿತು.** –

## III. ಈ ಸಿಂಡಿಕೇಟು ಸಭೆಗೆ ಮಂಡಿಸಿರುವ ಕಾರ್ಯಸೂಚಿಗಳು

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ಸಾ.ಸ.8:01(2020)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿ ಇವರ ದೂರಿನ ಕುರಿತು ಮಂಗಳೂರು ವಿಶ್ವವಿದ್ಯಾನಿಲಯದ ಆಂತರಿಕ ದೂರು ಸಮಿತಿಯು ತನಿಖೆ ನಡೆಸಿ ಸಲ್ಲಿಸಿದ ವರದಿಯ ಆಧಾರದಲ್ಲಿ ಶಿಸ್ತು ಕ್ರಮ ಕೈಗೊಳ್ಳುವ ಬಗ್ಗೆ.

**ನಿರ್ಣಯ:** ಈ ಬಗ್ಗೆ ವಿಸ್ತೃತವಾಗಿ ಚರ್ಚಿಸಲಾಯಿತು. ಪ್ರತಿ ಸದಸ್ಯರುಗಳಿಗೆ ತಮ್ಮ ಅಭಿಪ್ರಾಯಗಳನ್ನು ಮುಕ್ತವಾಗಿ ವ್ಯಕ್ತಪಡಿಸಲು ತಲಾ ಎರಡು ಬಾರಿ ಅವಕಾಶಗಳನ್ನು ನೀಡಲಾಯಿತು. ಆದಾಗ್ಯೂ ವಿಷಯದ ಗಂಭೀರತೆಯನ್ನು ಪರಿಗಣಿಸಿ, ಈ ಬಗ್ಗೆ ಇನ್ನೊಮ್ಮೆ ಚರ್ಚಿಸಿ ಅಂತಿಮ ನಿರ್ಣಯಕ್ಕೆ ಬರಲು ದಿನಾಂಕ 30.12.2020ರಂದು ಸಿಂಡಿಕೇಟಿನ ವಿಶೇಷ

ಸಭೆಯನ್ನು ನಡೆಸಲು ತೀರ್ಮಾನಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಕಾನೂನು ಘಟಕ ಸಾ.ಸ.8:02(2020)

**ವಿಷಯ:** ವಿಶ್ವವಿದ್ಯಾನಿಲಯದ ವಕೀಲರ ಯಾದಿಯಲ್ಲಿನ ವಕೀಲರಿಗೆ ಶುಲ್ಕ ನಿಗದಿಪಡಿಸಿ ಹೊರಡಿಸಿರುವ ಅದೇಶ ದಿನಾಂಕ 29.11.2019ರ ಕಂಡಿಕೆ ''6'' ಅನ್ನು ಪರಿಷ್ಕರಿಸುವ ಬಗ್ಗೆ.

**ನಿರ್ಣಯ:** ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ವಕೀಲರ ಯಾದಿಯಲ್ಲಿರುವ ವಕೀಲರಿಗೆ ಪಾವತಿಸಬೇಕಾದ ಶುಲ್ಕಗಳನ್ನು ನಿಗದಿಪಡಿಸಿ ಹೊರಡಿಸಿರುವ ಆದೇಶದ ಕ್ರಮ ಸಂಖ್ಯೆ 6ನ್ನು ಈ ಕೆಳಗಿನಂತೆ ತಿದ್ದುಪಡಿ ಮಾಡಿ ಪರಿಷ್ಕೃತ ಆದೇಶವನ್ನು ಸಿಂಡಿಕೇಟು ಸಭೆಯ ದಿನಾಂಕದಿಂದ ಅನ್ವಯವಾಗುವಂತೆ ಜಾರಿಗೊಳಿಸಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

"The Vice-Chancellor is authorized to fix the fee to the extent of Rs. 50,000/- (Rupees Fifty thousand only) in respect of any case including the cases mentioned above depending upon the merits and urgency of the case.
Payment of fees exceeding Rs. 50,000/- (Rupees Fifty thousand only) in respect of all other cases which are not covered above shall be subject to the approval of the Syndicate."

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟ್ ಸಾ.ಸ.8:03(2020)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಇಲ್ಲಿ ಯೋಗ ಚಿಕಿತ್ಸಾ ಕೇಂದ್ರವನ್ನು ಪ್ರಾರಂಭಿಸುವ ಬಗ್ಗೆ ಪ್ರಸ್ತಾವನೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ ಸಾ.ಸ.8:04(2020)

**ವಿಷಯ:** ಶೈಕ್ಷಣಿಕ ವರ್ಷ 2021–22ನೇ ಸಾಲಿನ ಸಂಯೋಜನೆಯ ಹಾಗೂ ಶೈಕ್ಷಣಿಕ ವರ್ಷ 2020–21ನೇ ಸಾಲಿನ ಸೇವಾ ಶುಲ್ಕವನ್ನು ನಿಗದಿಪಡಿಸುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಹಣಕಾಸು ವಿಭಾಗ ಸಾ.ಸ.8:05(2020)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ 2016–17ನೇ ಸಾಲಿನ ಲೆಕ್ಕಪರಿಶೋಧನ ವರದಿ–ಅನುಸರಣಾ ವರದಿಯ ಅನುಮೋದನೆ ಕುರಿತು.

**ನಿರ್ಣಯ:** ಪ್ರಸ್ತಾವನೆಯ ಬಗ್ಗೆ ವಿಸ್ತೃತ ಚರ್ಚೆಯ ಅಗತ್ಯವಿರುವುದರಿಂದ ಮುಂದೂಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಪರೀಕ್ಷಾಂಗ ಸಾ.ಸ.8:06(2020)

**ವಿಷಯ:** 2020–21ನೇ ಸಾಲಿನ ಪರೀಕ್ಷಾ ಗಣಕೀಕರಣದ ಕಾರ್ಯ ನಿರ್ವಹಿಸಲು ಟೆಂಡರ್ ಪ್ರಕ್ರಿಯೆ ನಡೆಸುವ ಬಗ್ಗೆ.

**ನಿರ್ಣಯ:** ಪ್ರಸ್ತುತ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಪರೀಕ್ಷಾ ಗಣಕೀಕರಣದ ಕಾರ್ಯವನ್ನು ನಿರ್ವಹಿಸುತ್ತಿರುವ ಮೆ. ಆ್ಯಟ್ರಿಸ್ ಸಂಸ್ಥೆಯವರು ಸಂಬಂಧಿತ ಡೇಟಾವನ್ನು

ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಬೇಕಾಗಿದ್ದು, ಸದರಿಯವರ ಸೇವೆಯು ವಿಶ್ವವಿದ್ಯಾನಿಲಯದ 39 ನೇ ವಾರ್ಷಿಕ ಘಟಿಕೋತ್ಸವದ ತನಕ ಅಗತ್ಯವಿರುವುದರಿಂದ ಅಲ್ಲಿಯವರೆಗೆ ಸದರಿಯವರ ಸೇವೆಯನ್ನು ಬಳಸಿಕೊಳ್ಳಲು ಸಿಂಡಿಕೇಟು ಅನುಮತಿಯನ್ನು ನೀಡಿತು. ಮುಂದುವರಿದು, ವಿಶ್ವವಿದ್ಯಾನಿಲಯಕ್ಕೆ ಈಗಾಗಲೇ ಓಪನ್ ಸೋರ್ಸ್ ಮೂಲಕ ಸಾಫ್ಟ್‌ವೇರ್ ಒದಗಿಸಲು ಕಾರ್ಯಪ್ರವೃತ್ತರಾಗಿರುವ ಶ್ರೀ ಹರೀಶ್ ಶೆಟ್ಟಿ, ಮಂಗಳೂರು ಮತ್ತು ತಂಡ ಇವರ ಸಹಕಾರವನ್ನು ಬಳಸಿಕೊಂಡು ಮುಂಬರುವ ವರ್ಷಗಳಲ್ಲಿ ಮಂಗಳೂರು ವಿಶ್ವವಿದ್ಯಾನಿಲಯವು ಪರೀಕ್ಷಾ ಗಣಕೀಕರಣಕ್ಕೆ ಸಂಬಂಧಿಸಿ, ತನ್ನದೇ ಆದ ಸಾಫ್ಟ್‌ವೇರ್‌ನ್ನು ಅಭಿವೃದ್ಧಿಪಡಿಸಲು ಎಲ್ಲಾ ರೀತಿಯ ಕ್ರಮಗಳನ್ನು ಕೈಗೊಳ್ಳಲು ಸಿಂಡಿಕೇಟು ನಿರ್ಣಯಿಸಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ ಸಾ.ಸ.8:07(2020)
**ವಿಷಯ:** ವ್ಯವಹಾರ ಆಡಳಿತ ವಿಭಾಗ–ಗಣಕಯಂತ್ರ ಪ್ರಯೋಗಾಲಯದ “PROWESS” Database ವಾರ್ಷಿಕ ಚಂದಾ ನವೀಕರಣ ಶುಲ್ಕ ಪಾವತಿಗೆ ಮಂಜೂರಾತಿ ನೀಡುವ ಬಗ್ಗೆ.
**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಆಡಳಿತ ಸಾ.ಸ.8:08(2020)
**ವಿಷಯ:** ವಿಶ್ವವಿದ್ಯಾನಿಲಯದ ಗ್ರಂಥಾಲಯಕ್ಕೆ ಅಗತ್ಯವಿರುವ 02 ಸಂಖ್ಯೆಯ 5 KVA UPS ಮತ್ತು 20 Battery ಗಳನ್ನು ವಿನಿಮಯ ದರದಲ್ಲಿ ಖರೀದಿಸಲು ಮಂಜೂರಾತಿ ನೀಡುವ ಕುರಿತು.
**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಪರೀಕ್ಷಾಂಗ ಸಾ.ಸ.8:09(2020)
**ವಿಷಯ:** ಫೆಬ್ರವರಿ/ಸೆಪ್ಟೆಂಬರ್/ಅಕ್ಟೋಬರ್ 2020ರಲ್ಲಿ ಜರುಗಿದ ವಿಶ್ವವಿದ್ಯಾನಿಲಯದ ವಿವಿಧ ಪದವಿ ಪರೀಕ್ಷೆಗಳಲ್ಲಿ ಪರೀಕ್ಷಾ ಅವ್ಯವಹಾರ ನಡೆಸಿದ ವಿದ್ಯಾರ್ಥಿಗಳ ಬಗ್ಗೆ ತನಿಖಾ ವರದಿ.
**ನಿರ್ಣಯ:** ಪ್ರಸ್ತಾವನೆಯ ಬಗ್ಗೆ ವಿಸ್ತೃತ ಚರ್ಚೆಯ ಅಗತ್ಯವಿರುವುದರಿಂದ ಮುಂದೂಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಾರ್ವತ್ರಿಕ ಸಾ.ಸ.8:10(2020)
**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಅಂತರಾಷ್ಟ್ರೀಯ ವಿದ್ಯಾರ್ಥಿಗಳ ವಾಸ್ತವ್ಯಕ್ಕೆ ಪಡೆದುಕೊಂಡಿದ್ದ ಪ್ಲಾಮಾ ನೆಸ್ಟ್ ಕಟ್ಟಡದ 6 ಫ್ಲಾಟ್‌ಗಳ ದುರಸ್ತಿ ಬಗ್ಗೆ.
**ನಿರ್ಣಯ:** ಮಂಗಳೂರು ವಿಶ್ವವಿದ್ಯಾನಿಲಯದ ಅಂತರಾಷ್ಟ್ರೀಯ ವಿದ್ಯಾರ್ಥಿಗಳ ವಾಸ್ತವ್ಯಕ್ಕೆ ಲೈಸೆನ್ಸ್ ಫೀ ಆಧಾರದಲ್ಲಿ ಪಡೆದುಕೊಂಡಿದ್ದ ಪ್ಲಾಮಾ ನೆಸ್ಟ್ ಕಟ್ಟಡದ 6 ಫ್ಲಾಟ್‌ಗಳ ದುರಸ್ತಿ ಕಾರ್ಯಕ್ಕೆ ತಗಲುವ ಅಂದಾಜು ವೆಚ್ಚ ರೂ.1,42,000/– (ರೂಪಾಯಿ ಒಂದು ಲಕ್ಷದ ನಲವತ್ತೆರಡು ಸಾವಿರ ಮಾತ್ರ)ವನ್ನು ವಿಶ್ವವಿದ್ಯಾನಿಲಯವು ಸದರಿ ಕಟ್ಟಡ ಮಾಲಿಕರಿಗೆ ಈಗಾಗಲೇ ಪಾವತಿಸಿರುವ ಭದ್ರತಾ ಠೇವಣಿ ಮೊತ್ತ ರೂ.3,90,000.00 (ರೂಪಾಯಿ ಮೂರು ಲಕ್ಷದ ತೊಂಬತ್ತು ಸಾವಿರ ಮಾತ್ರ) ದಿಂದ ಕಡಿತಗೊಳಿಸಿ ಉಳಿಕೆ ಮೊತ್ತ ರೂ.2,48,000/– (ರೂಪಾಯಿ ಎರಡು ಲಕ್ಷದ ನಲವತ್ತೆಂಟು ಸಾವಿರ ಮಾತ್ರ)ವನ್ನು ವಿಶ್ವವಿದ್ಯಾನಿಲಯದ ನಿಧಿಗೆ ಪಾವತಿಸುವಂತೆ ಸದರಿ ಕಟ್ಟಡ ಮಾಲೀಕರಿಗೆ

ತಿಳಿಸಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

**ಕಾರ್ಯಸೂಚಿ ಸಂಖ್ಯೆ:** ಮಂವಿ/ಇಡಿ/ ಸಾ.ಸ.8:11(2020)
**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯ ಆವರಣದಲ್ಲಿರುವ ವಿಜ್ಞಾನ ಸಂಕೀರ್ಣ ಕಟ್ಟಡದ ವಿಶೇಷ ದುರಸ್ತಿ ಕಾಮಗಾರಿ (ರೂಸಾ ಅನುದಾನ)–ಟೆಂಡರ್ ಅಂಗೀಕರಿಸುವ ಬಗ್ಗೆ.
**ನಿರ್ಣಯ:** ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಮಂವಿ/ಇಡಿ/ ಸಾ.ಸ.8:12(2020)
**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯ ಆವರಣದ ವಿಜ್ಞಾನ ಸಂಕೀರ್ಣ ಕಟ್ಟಡದ ಮೊದಲ ಅಂತಸ್ತಿನ ರಸಾಯನ ಶಾಸ್ತ್ರ ವಿಭಾಗಕ್ಕೆ ಸಂಬಂಧಿಸಿದ L2 ಮತ್ತು L3 ತರಗತಿ ಕೊಠಡಿಗಳನ್ನು ಅನ್ವಯಿಕ ರಸಾಯನ ಶಾಸ್ತ್ರ ಪ್ರಯೋಗಾಲಯವನ್ನಾಗಿ ಪರಿವರ್ತಿಸುವುದು (ರೂಸಾ ಅನುದಾನ) – ಟೆಂಡರ್ ಅಂಗೀಕರಿಸುವ ಬಗ್ಗೆ.
**ನಿರ್ಣಯ:** ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಮಂವಿ/ಇಡಿ/ ಸಾ.ಸ.8:13(2020)
**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯ ಆವರಣದಲ್ಲಿರುವ ಜೀವ ವಿಜ್ಞಾನ ಮತ್ತು ಅನ್ವಯಿಕ ಪ್ರಾಣಿ ಶಾಸ್ತ್ರ ವಿಭಾಗಗಳ ತರಗತಿ ಕೊಠಡಿಗಳನ್ನು ಪ್ರಯೋಗಾಲಯವಾಗಿ ಪರಿವರ್ತಿಸುವುದು (ರೂಸಾ ಅನುದಾನ) – ಟೆಂಡರ್ ಅಂಗೀಕರಿಸುವ ಬಗ್ಗೆ.
**ನಿರ್ಣಯ:** ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಆಡಳಿತ ಸಾ.ಸ.8:14(2020)
**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಗಣಕಯಂತ್ರ ಕೇಂದ್ರದ Central Computer Labಗೆ ಅಗತ್ಯವಿರುವ ಕಂಪ್ಯೂಟರ್ ಟೇಬಲ್‌ಗಳ ಖರೀದಿಗೆ ಮಂಜೂರಾತಿ ನೀಡುವ ಬಗ್ಗೆ.
**ನಿರ್ಣಯ:** ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು. ಮುಂದುವರಿದು ವಿಶ್ವವಿದ್ಯಾನಿಲಯವು ತಿಳಿಸಿರುವ Specification ನಂತೆ ಸರಬರಾಜು ಆದೇಶ ನೀಡಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಆಡಳಿತ ಸಾ.ಸ.8:15(2020)
**ವಿಷಯ:** ಕುಲಸಚಿವರ ಕಚೇರಿಯಲ್ಲಿರುವ ಡುಪ್ಲೋ ಯಂತ್ರಕ್ಕೆ ಅಗತ್ಯವಿರುವ Master Roll ಹಾಗೂ Ink ಖರೀದಿ ಬಗ್ಗೆ.
**ನಿರ್ಣಯ:** ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಆಡಳಿತ ಸಾ.ಸ.8:16(2020)
**ವಿಷಯ:** ಕಂಪ್ಯೂಟರ್ ಸ್ಟೇಶನರಿ (ಲೇಸರ್ ಜೆಟ್ ಟೋನರ್ ಮತ್ತು ಇಂಕ್ ಜೆಟ್ ಕಾಟ್ರೇಡ್ಜ್)

ಖರೀದಿಸಲು ಗುತ್ತಿಗೆದಾರರನ್ನು ನಿಗದಿಗೊಳಿಸುವ ಬಗ್ಗೆ.

**ನಿರ್ಣಯ:** ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಆಡಳಿತ ಸಾ.ಸ.8:17(2020)

**ವಿಷಯ:** ವಿಶ್ವವಿದ್ಯಾನಿಲಯ ಕಾಲೇಜು ನೆಲ್ಯಾಡಿ ಇಲ್ಲಿಗೆ ಮರದ ಪೀಠೋಪಕರಣಗಳ ಖರೀದಿಗೆ ಮಂಜೂರಾತಿ ನೀಡುವ ಬಗ್ಗೆ.

**ನಿರ್ಣಯ:** ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಪಿಎಂಇಬಿ ಸಾ.ಸ.8:18(2020)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಗಣಕಯಂತ್ರ ಕೇಂದ್ರ, Seminar Hall ಗಳಿಗೆ ಮತ್ತು ವಿವಿಧ ವಿಭಾಗ/ಕಛೇರಿಗಳಿಗೆ ಬೇಕಾಗಿರುವ ಉಪಕರಣಗಳನ್ನು ರೂಸಾ ಅನುದಾನದಿಂದ ಖರೀದಿಸುವ ಪ್ರಸ್ತಾವನೆ ಬಗ್ಗೆ.

**ನಿರ್ಣಯ:** ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಪ.ಜಾ.ಪ.ಪಂ ಘಟಕ ಸಾ.ಸ.8:19(2020)

**ವಿಷಯ:** ಶ್ರೀ. ಕೀರ್ತಿ ಟಿ ಯವರ ಸಂಶೋಧನಾ ಶಿಷ್ಯವೇತವನ್ನು ಮರುಪಾವತಿಸುವ ವಿಚಾರವಾಗಿ ಸದ್ರಿ ವಿದ್ಯಾರ್ಥಿಯ ಮನವಿಯ ಬಗ್ಗೆ.

**ನಿರ್ಣಯ:** ಪ್ರಸ್ತಾವನೆಯನ್ನು ವಿಸ್ತೃತವಾಗಿ ಚರ್ಚಿಸಲಾಯಿತು. ಶ್ರೀ ಕೀರ್ತಿ ಟಿ. ಇವರು ತನ್ನ ಸಂಶೋಧನಾ ಕಾರ್ಯವನ್ನು part time ಎಂದು ಪರಿಗಣಿಸುವಂತೆ ಮನವಿ ಸಲ್ಲಿಸಿದ್ದು, ಯುಜಿಸಿ ನಿಯಮಾವಳಿಯಲ್ಲಿಯೂ ಏಕಕಾಲದಲ್ಲಿ ಎರಡು ಪದವಿಗಳನ್ನು ಪಡೆಯುವ ಅವಕಾಶ ಇರುವುದರಿಂದ ಮತ್ತು ಸದರಿಯವರು ಎಂ.ಪಿ.ಎಡ್ ಪದವಿಗೆ ಪ್ರವೇಶಾತಿ ಪಡೆದ ನಂತರ ತನಗೆ ಪಾವತಿಸುತ್ತಿರುವ ಶಿಷ್ಯವೇತನವನ್ನು ಪಡೆದುಕೊಂಡಿಲ್ಲವಾದುದರಿಂದ ಮಾನವೀಯ ನೆಲೆಯಲ್ಲಿ ಸದರಿಯವರಿಗೆ ಈವರೆಗೆ ಪಾವತಿಸಲಾಗಿರುವ ಸಂಶೋಧನಾ ಶಿಷ್ಯವೇತನ ಮತ್ತು ಸಾದಿಲ್ವಾರು ಬಿಲ್ಲಿನ ಒಟ್ಟು ಮೊತ್ತ ರೂ. 2,12,260.00 (ರೂಪಾಯಿ ಎರಡು ಲಕ್ಷದ ಹನ್ನೆರಡು ಸಾವಿರದ ಇನ್ನೂರ ಅರವತ್ತು ಮಾತ್ರ) ವನ್ನು ಸದರಿಯವರಿಂದ ವಸೂಲು ಮಾಡುವ ಪ್ರಸ್ತಾವನೆಯನ್ನು ಕೈಬಿಡುವಂತೆ ಸಿಂಡಿಕೇಟು ಸರ್ವಾನುಮತದಿಂದ ನಿರ್ಣಯಿಸಿತು.

ಮುಂದುವರಿದು, ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಜಾರಿಯಲ್ಲಿರುವ ಎಸ್‌ಸಿ/ಎಸ್‌ಟಿ ವಿದ್ಯಾರ್ಥಿಗಳಿಗೆ ಸಂಶೋಧನಾ ಶಿಷ್ಯವೇತನ ಪಾವತಿಸುವ ನಿಯಮಾವಳಿಯಲ್ಲಿ ಯುಜಿಸಿ ನಿಯಮಾವಳಿಯನ್ವಯ ಸೂಕ್ತ ತಿದ್ದುಪಡಿ ಮಾಡಲು ಕ್ರಮಕೈಗೊಳ್ಳುವಂತೆ ಸಿಂಡಿಕೇಟು ನಿರ್ಣಯಿಸಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ ಸಾ.ಸ.8:20(2020)

**ವಿಷಯ:** ವಿಶ್ವವಿದ್ಯಾನಿಲಯದ ಗ್ರಂಥಾಲಯದಿಂದ ಪಡೆದ ಪುಸ್ತಕಗಳನ್ನು ವಿದ್ಯಾರ್ಥಿಗಳು Due Date ನಂತರ ಹಿಂತಿರುಗಿಸುವಾಗ Late Fees ಗೆ ವಿನಾಯಿತಿ ನೀಡುವ ಬಗ್ಗೆ.

**ನಿರ್ಣಯ:** ಘಟನೋತ್ತರವಾಗಿ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಆಡಳಿತ ಸಾ.ಸ.8:21(2020)
**ವಿಷಯ:** ಶ್ರೀ. ಲವ ಗೌಡ ಕೆ, ವಾಹನ ಚಾಲಕರು ಇವರ ವೈದ್ಯಕೀಯ ವೆಚ್ಚದ ಮರುಭರಣೆ ಬಗ್ಗೆ.
**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ಸಾ.ಸ.8:22(2020)
**ವಿಷಯ:** ಸ್ನಾತಕೋತ್ತರ ವಿಭಾಗಗಳ ಹುದ್ದೆಗಳನ್ನು ಅಗತ್ಯತೆಗನುಗುಣವಾಗಿ ರಿಡಿಪ್ಲಾಯ್‌ಮೆಂಟ್ ಮಾಡಿದ ಪ್ರಸ್ತಾವನೆಯನ್ನು ಅನುಮೋದಿಸುವ ಬಗ್ಗೆ.
**ನಿರ್ಣಯ:** ಪ್ರಸ್ತಾವನೆಯಲ್ಲಿ ತಿಳಿಸಿರುವ ಬಿ.ಪಿ.ಎಡ್ ಕೋರ್ಸು, ಮಂಗಳಗಂಗೋತ್ರಿ ಇಲ್ಲಿ ಖಾಲಿ ಇರುವ 01 ಸಹಾಯಕ ಪ್ರಾಧ್ಯಾಪಕ ಹುದ್ದೆಯನ್ನು ಫೀಲ್ಡ್ ಮಾರ್ಷಲ್ ಕೆ. ಎಂ. ಕಾರ್ಯಪ್ಪ ಕಾಲೇಜಿನ ಸೂಕ್ಷ್ಮಾಣು ಜೀವವಿಜ್ಞಾನ ವಿಭಾಗ ಇಲ್ಲಿಂದ ರಿಡಿಪ್ಲಾಯ್‌ಮೆಂಟ್ ಮಾಡುವ ವಿಷಯವನ್ನು ಹೊರತುಪಡಿಸಿ, ಉಳಿದ ಎಲ್ಲಾ ಹುದ್ದೆಗಳನ್ನು ರಿಡಿಪ್ಲಾಯ್‌ಮೆಂಟ್ ಮಾಡುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ಸಾ.ಸ.8:23(2020)
**ವಿಷಯ:** ಶ್ರೀ. ಪ್ರವೀಣ್ ಕುಮಾರ್ ಜೆ.ಪಿ., ಮೆಕ್ಯಾನಿಕ್, ಕಾರ್ಯಕಾರಿ ಅಭಿಯಂತರರ ಕಚೇರಿ, ಮಂಗಳೂರು ವಿಶ್ವವಿದ್ಯಾನಿಲಯ ಇವರನ್ನು ಶ್ರೀ ಯು.ಟಿ. ಖಾದರ್, ಮಾನ್ಯ ವಿಧಾನಸಭಾ ಸದಸ್ಯರು, ಮಂಗಳೂರು ವಿಧಾನಸಭಾ ಕ್ಷೇತ್ರ ಇವರ ಆಪ್ತ ಸಿಬ್ಬಂದಿ ಶಾಖೆಗೆ ಹೆಚ್ಚುವರಿಯಾಗಿ ನಿಯೋಜಿಸುವ ಬಗ್ಗೆ.
**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ಸಾ.ಸ.8:24(2020)
**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಎ.ಸಿ ಮೆಕ್ಯಾನಿಕ್ ಸೇವೆಯನ್ನು ತಾತ್ಕಾಲಿಕ ನೆಲೆಯಲ್ಲಿ ಬಳಸಿಕೊಳ್ಳುವ ಬಗ್ಗೆ.
**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟ್ ಸಾ.ಸ.8:25(2020)
**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಅಧ್ಯಕ್ಷರುಗಳ ನೇಮಕಾತಿ ಬಗ್ಗೆ.
**ನಿರ್ಣಯ:** ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಗೆ ಅಧ್ಯಕ್ಷರುಗಳನ್ನು ನಿಯಮಾನುಸಾರ ನೇಮಕಾತಿ ಮಾಡುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟ್ ಸಾ.ಸ.8:26(2020)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಗಣಿತಶಾಸ್ತ್ರ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರ ನೇಮಕಾತಿ ಬಗ್ಗೆ.

**ನಿರ್ಣಯ:** ಸ್ನಾತಕೋತ್ತರ ಗಣಿತಶಾಸ್ತ್ರ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರನ್ನು ನಿಯಮಾನುಸಾರ ನೇಮಕಾತಿ ಮಾಡುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ ಸಾ.ಸ.8:27(2020)

**ವಿಷಯ:** ಸರ್ಕಾರಿ ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯ, ಮಂಗಳೂರು ಈ ವಿದ್ಯಾಸಂಸ್ಥೆಯನ್ನು ವಿಶ್ವವಿದ್ಯಾನಿಲಯದ ಘಟಕ ಕಾಲೇಜನ್ನಾಗಿ ಪರಿವರ್ತಿಸುವ ಸಂಬಂಧ ತಜ್ಞರ ಸಮಿತಿಯು ಭೇಟಿ ನೀಡಿ ಸಲ್ಲಿಸಿದ ವರದಿಯ ಬಗ್ಗೆ.

**ನಿರ್ಣಯ:** ತಜ್ಞರ ಸಮಿತಿಯು ಸಲ್ಲಿಸಿದ ವರದಿಯನ್ನು ಪರಿಶೀಲಿಸಲಾಯಿತು. ಸಮಿತಿಯು ಸಲ್ಲಿಸಿದ ವರದಿಯ ಆಧಾರದ ಮೇಲೆ ಸದರಿ ಕಾಲೇಜಿನ ಪ್ರಾಂಶುಪಾಲರು ಸಮಿತಿಯೊಂದಿಗೆ ತೋರಿದ ಅಸಹಕಾರದ ವರ್ತನೆಯನ್ನು ಸಿಂಡಿಕೇಟು ಗಂಭೀರವಾಗಿ ಪರಿಗಣಿಸಿ ಸಭೆಯು ತನ್ನ ಆಕ್ಷೇಪಣೆಯನ್ನು ವ್ಯಕ್ತಪಡಿಸಿತು. ಆದರೆ, ಸದರಿ ಕಾಲೇಜಿನ ಪ್ರಾಂಶುಪಾಲರು ಸಾರ್ವಜನಿಕ ಶಿಕ್ಷಣ ಆಯುಕ್ತರ ಪರವಾಗಿ ಸಭೆಯಲ್ಲಿ ಉಪಸ್ಥಿತರಿರುವುದರಿಂದ ತಮ್ಮ ಕಡೆಯಿಂದ ತಪ್ಪಾಗಿರುವುದಕ್ಕೆ ವಿಷಾದವನ್ನು ವ್ಯಕ್ತಪಡಿಸಿ, ಕ್ಷಮಾಪಣೆಯನ್ನು ಕೋರಿದರು. ಮುಂದುವರಿದು, ಸರ್ಕಾರಿ ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯ, ಮಂಗಳೂರು ಈ ವಿದ್ಯಾಸಂಸ್ಥೆಯನ್ನು ಮಂಗಳೂರು ವಿಶ್ವವಿದ್ಯಾನಿಲಯದ ಘಟಕ ಕಾಲೇಜನ್ನಾಗಿ ಪರಿಗಣಿಸಲು ಪರಾಮರ್ಶನೆಗಾಗಿ ರಚಿಸಲಾಗಿರುವ ತಜ್ಞರ ಸಮಿತಿಯ ಪರಿಶೀಲನೆಗೆ ಅಗತ್ಯವಾಗಿರುವ ದಾಖಲೆಗಳನ್ನು ಕೂಡಲೇ ಒದಗಿಸಿ ಸಹಕರಿಸುವಂತೆ ಪ್ರಾಂಶುಪಾಲರಿಗೆ ಸೂಚಿಸಲು ಅಗತ್ಯ ಕ್ರಮಕ್ಕೈಗೊಳ್ಳುವಂತೆ ಸಿಂಡಿಕೇಟು ನಿರ್ಣಯಿಸಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ ಸಾ.ಸ.8:28(2020)

**ವಿಷಯ:** ಗ್ಲೋರಿಯಾ ಕಾಲೇಜು, ಪುತ್ತೂರು ಎಂಬ ವಿದ್ಯಾಸಂಸ್ಥೆಯ ಹೆಸರು ಬದಲಾವಣೆ ಕುರಿತು.

**ನಿರ್ಣಯ:** ಸದರಿ ವಿದ್ಯಾಸಂಸ್ಥೆಯ ಹೆಸರನ್ನು "ಅಕ್ಷಯ ಕಾಲೇಜು, ಪುತ್ತೂರು" ಎಂದು ಬದಲಾವಣೆ ಮಾಡುವ ಬಗ್ಗೆ ಶೈಕ್ಷಣಿಕ ಮಂಡಳಿಯು ಮಾಡಿರುವ ಶಿಫಾರಸ್ಸನ್ನು ಪರಿಗಣಿಸಿ, ಈ ಬಗ್ಗೆ ಅನುಮತಿಗಾಗಿ ಸದರಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟ್ ಸಾ.ಸ.8:29(2020)

**ವಿಷಯ:** ಡಾ. ಪಾರ್ವತಿ ಅಪ್ಪಯ್ಯ, ಸಿಂಡಿಕೇಟ್ ಸದಸ್ಯರು, ಇವರು ಸಲ್ಲಿಸಿರುವ ಪ್ರಸ್ತಾವನೆ ಕುರಿತು.

**ವಿಷಯ:**

1. To discuss and adopt the guidelines proposed by the committee for the in-charge

Principal of constituent colleges of Mangalore University.

**ನಿರ್ಣಯ: ಸಮಿತಿಯು ಸಲ್ಲಿಸಿದ ಮಾರ್ಗಸೂಚಿಗಳನ್ನು ಪರಿಶೀಲಿಸಲಾಯಿತು.**

2. To provide free transport facility for P.G. Students of Chikka Aluvara from the bus-stand to the campus during peak hours especially in the morning.

**ನಿರ್ಣಯ:** ಉಚಿತ ಸಾರಿಗೆ ವ್ಯವಸ್ಥೆಯನ್ನು ಕಲ್ಪಿಸುವುದು ಅಸಾಧ್ಯವಾದ ಕಾರಣ ಪ್ರಸ್ತುತ ಇರುವ ಪ್ರಯಾಣ/ಸಾರಿಗೆ ಶುಲ್ಕದಲ್ಲಿ ಶೇಕಡಾ 50ನ್ನು ಕಡಿತಗೊಳಿಸಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

3. To transfer excess non-teaching staff of P.G. Centre of Chikka Aluvara to Field Marshal K. M. Cariappa College, Madikeri.

**ನಿರ್ಣಯ:** ಈ ಬಗ್ಗೆ ಪರಿಶೀಲಿಸಿ ಸೂಕ್ತ ಆಡಳಿತಾತ್ಮಕ ನಿರ್ಧಾರ ಕೈಗೊಳ್ಳಲು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಲಾಯಿತು.

4. To start P. G. Course in Chemistry in Field Marshal K. M. Cariappa College, Madikeri

**ನಿರ್ಣಯ:** ಈ ಬಗ್ಗೆ ಸದರಿ ಕಾಲೇಜಿನ ಪ್ರಾಂಶುಪಾಲರ ಮೂಲಕ ವಿಶ್ವವಿದ್ಯಾನಿಲಯಕ್ಕೆ ಮನವಿ ಸಲ್ಲಿಸುವಂತೆ ತಿಳಿಸಲು ಡಾ. ಪಾರ್ವತಿ ಅಪ್ಪಯ್ಯ ಇವರಿಗೆ ತಿಳಿಸಲಾಯಿತು.

5. To transfer Dr. Rajendra of Mathematics Department of Mangalore University to Field Marshal K. M. Cariappa College, Madikeri

**ನಿರ್ಣಯ:** ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಕಾಲೇಜಿನ ಗಣಿತಶಾಸ್ತ್ರ ವಿಭಾಗದಲ್ಲಿ ಡಾ. ರಾಜೇಂದ್ರ ಇವರನ್ನು ಹೊರತುಪಡಿಸಿ ಇತರೇ ಖಾಯಂ ಶಿಕ್ಷಕ ಸಿಬ್ಬಂದಿಗಳು ಇಲ್ಲದಿರುವುದರಿಂದ ಸದರಿಯವರನ್ನು ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಕಾಲೇಜಿಗೆ ವರ್ಗಾವಣೆ ಮಾಡಲು ಸೂಕ್ತ ಆಡಳಿತಾತ್ಮಕ ಕ್ರಮಕೈಗೊಳ್ಳಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು. ಆದಾಗ್ಯೂ ವಿಶ್ವವಿದ್ಯಾನಿಲಯಕ್ಕೆ ನ್ಯಾಕ್ ಭೇಟಿಯ ಸಂದರ್ಭದಲ್ಲಿ ಸದರಿಯವರು ಸ್ನಾತಕೋತ್ತರ ಗಣಿತಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಕಾರ್ಯನಿರ್ವಹಿಸಲು ಸೂಚಿಸಬಹುದೆಂಬುದಾಗಿಯೂ ಸಿಂಡಿಕೇಟು ನಿರ್ಣಯಿಸಿತು.

6. Unused residential building/Quarters in Field Marshal K. M. Cariappa College, Madikeri to be repaired immediately and utilized for residence. Guest house proposal in Principal's quarters to be completed on a priority basis.

**ನಿರ್ಣಯ:** ಈ ಬಗ್ಗೆ ಸೂಕ್ತ ಕ್ರಮಕೈಗೊಳ್ಳಲು ಸಿಂಡಿಕೇಟು ನಿರ್ಣಯಿಸಿತು.

7. Kodava language to be offered as an optional language of study at the degree level.

**ನಿರ್ಣಯ:** ಕೊಡವ ಭಾಷಾ ವಿಷಯವನ್ನು ಮಂಗಳೂರು ವಿಶ್ವವಿದ್ಯಾನಿಲಯದ ಪದವಿ ತರಗತಿಗಳಲ್ಲಿ

ಪ್ರಾರಂಭಿಸುವ ಬಗ್ಗೆ ಇರುವ ಸಾಧಕ ಭಾಧಕಗಳನ್ನು ಸಭೆಯಲ್ಲಿ ಚರ್ಚಿಸಲಾಯಿತು.

8. To constitute the committees in the Syndicate meetings for any purpose, fix the time limit, discuss the jurisdiction of the committee and effect any change in the committee if necessary.

**ನಿರ್ಣಯ:** ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಅಸ್ತಿತ್ವದಲ್ಲಿರುವ ಪರಿನಿಯಮ "Statute Governing Rules of Business of The Syndicate, The Academic Council, The Finance Committee and the Faculties" ನ ಅನುಸಾರವೇ ಕಾರ್ಯನಿರ್ವಹಿಸಲಾಗುತ್ತಿದೆ ಎಂಬ ವಿಷಯವನ್ನು ಸಭೆಗೆ ತಿಳಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ ಸಾ.ಸ.8:30(2020)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಅಧೀನಕ್ಕೊಳಪಟ್ಟ ಎಲ್ಲಾ ಅಂಗಡಿ, ಕ್ಯಾಂಟೀನ್, ಮಳಿಗೆಗಳಿಗೆ ಲಾಕ್‌ಡೌನ್ ಹಿನ್ನಲೆಯ ಅವಧಿಯಲ್ಲಿ ಪರವಾನಗಿ ಶುಲ್ಕ ಪಾವತಿಗೆ ವಿನಾಯಿತಿ ನೀಡುವ ಬಗ್ಗೆ.

**ನಿರ್ಣಯ:** ಪ್ರಸ್ತಾವನೆಯ ಬಗ್ಗೆ ಸುದೀರ್ಘವಾಗಿ ಚರ್ಚಿಸಲಾಯಿತು. ಅಂತಿಮವಾಗಿ ಲಾಕ್‌ಡೌನ್ ಹಿನ್ನೆಲೆಯಲ್ಲಿ ವಿಶ್ವವಿದ್ಯಾನಿಲಯದ ಕ್ಯಾಂಪಸ್‌ನಲ್ಲಿರುವ ಅಂಗಡಿ, ಕ್ಯಾಂಟೀನ್, ಮಳಿಗೆಗಳ ವ್ಯಾಪಾರ ವ್ಯವಹಾರಗಳಿಗೆ ತೊಂದರೆಯುಂಟಾಗಿರುವುದರಿಂದ ನಿಗದಿಪಡಿಸಲಾಗಿರುವ ಮಾಸಿಕ ಬಾಡಿಗೆಯಲ್ಲಿ ದಿನಾಂಕ 22.03.2020 ರಿಂದ 19.05.2020 ರ ಅವಧಿಯ ಬಾಡಿಗೆಯನ್ನು ಸಂಪೂರ್ಣ ಮನ್ನಾ ಮಾಡಿ, ನಂತರ ದಿನಾಂಕ 20.05.2020 ರಿಂದ 19.07.2020ರವರೆಗಿನ ಬಾಡಿಗೆಯಲ್ಲಿ ನಿಗದಿಪಡಿಸಲಾದ ಮಾಸಿಕ ಬಾಡಿಗೆಯ ಶೇಕಡಾ 50ನ್ನು ನಿಗದಿಗೊಳಿಸಿ ಸದರಿ ಪರವಾನಗಿದಾರರಿಗೆ ಈ ಬಗ್ಗೆ ಮಾಹಿತಿ ನೀಡಿ ಶೀಘ್ರದಲ್ಲಿ ಬಾಕಿ ಇರುವ ಸಂಪೂರ್ಣ ಬಾಡಿಗೆಯನ್ನು ವಿಶ್ವವಿದ್ಯಾನಿಲಯಕ್ಕೆ ಪಾವತಿಸಬೇಕೆಂಬುದಾಗಿ ಸೂಚಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ಸಿಂಡಿಕೇಟು ನಿರ್ಣಯಿಸಿತು. ದಿನಾಂಕ 20.07.2020 ನಂತರದ ಎಲ್ಲಾ ತಿಂಗಳುಗಳ ಬಾಡಿಗೆಯನ್ನು ಪೂರ್ಣಪ್ರಮಾಣದಲ್ಲಿ ವಸೂಲುಮಾಡಬೇಕೆಂಬುದಾಗಿಯೂ ಸಿಂಡಿಕೇಟು ನಿರ್ಣಯಿಸಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ ಸಾ.ಸ.8:31(2020)

**ವಿಷಯ:** ಪ್ರೊ. ಡಿ. ಶಿವಲಿಂಗಯ್ಯ ಇವರನ್ನು ಗ್ರಂಥಾಲಯ ಹಾಗೂ ಮಾಹಿತಿ ವಿಜ್ಞಾನ ವಿಭಾಗಕ್ಕೆ Adjunct Professor ಆಗಿ ನೇಮಕಾತಿ ಮಾಡುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ಸಾ.ಸ.8:32(2020)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಸಹಾಯಕ ಕಾರ್ಯಕಾರಿ ಅಭಿಯಂತರ (A.E.E) ಹುದ್ದೆಗಳನ್ನು ನಿಯಂತ್ರಿಸುವ ಪರಿನಿಯಮದ ಅನುಮೋದನೆ ಬಗ್ಗೆ.

**ನಿರ್ಣಯ:** ಪರಿಷ್ಕೃತ ಕರಡು ಪರಿನಿಯಮವನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಪಿಎಂಇಬಿ:ಸಾ.ಸ.8:33(2020)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಗ್ರಂಥಾಲಯಕ್ಕೆ EBSCO Search Elite Database ಖರೀದಿಸಲು ಮಂಜೂರಾತಿ ನೀಡುವ ಬಗ್ಗೆ.

**ನಿರ್ಣಯ:** ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಆಡಳಿತ ಸಾ.ಸ.8:34(2020)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಆವರಣ, ಎಫ್.ಎಂ.ಕೆ.ಎಂ.ಸಿ ಕಾಲೇಜು ಮಡಿಕೇರಿ, ಸ್ನಾತಕೋತ್ತರ ಕೇಂದ್ರ ಚಿಕ್ಕಅಳುವಾರ, ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಮತ್ತು ದತ್ತು ಗ್ರಾಮಗಳ ಜನರಿಗೆ ಉಪಯೋಗವಾಗುವಂತೆ ಉಚಿತ ಕಣ್ಣಿನ ತಪಾಸಣೆ ಶಿಬಿರವನ್ನು ನಡೆಸಲು ಪ್ರಸಾದ್ ನೇತ್ರಾಲಯ, ಸೂಪರ್ ಸ್ಪೆಷಾಲಿಟಿ ಐ ಹಾಸ್ಪಿಟಲ್, ಎಂ.ಜಿ ರೋಡ್, ಲಾಲ್‌ಬಾಗ್, ಮಂಗಳೂರು ಇವರೊಂದಿಗೆ ಒಪ್ಪಂದ (MoU) ಮಾಡಿಕೊಳ್ಳುವ ಪ್ರಸ್ತಾವನೆಗೆ ಅನುಮೋದನೆ ನೀಡುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ ಸಾ.ಸ.8:35(2020)

**ವಿಷಯ:** ಸೂಕ್ಷ್ಮಾಣುಜೀವವಿಜ್ಞಾನ ವಿಭಾಗ, ಪಿ.ಜಿ ಸೆಂಟರ್, ಚಿಕ್ಕಅಳುವಾರ VGST- CISEE ಉಪಕರಣಗಳ ಖರೀದಿಯ ಪ್ರಸ್ತಾವನೆ ಬಗ್ಗೆ.

**ನಿರ್ಣಯ:** ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ಸಾ.ಸ.8:36(2020)

**ವಿಷಯ:** ಫೀಲ್ಡ್ ಮಾರ್ಷಲ್ ಕೆ.ಎಂ ಕಾರ್ಯಪ್ಪ ಕಾಲೇಜಿನ ಸೂಕ್ಷ್ಮಾಣುಜೀವವಿಜ್ಞಾನ ವಿಭಾಗದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ನೇಮಕಗೊಂಡಿರುವ ಶ್ರೀಮತಿ ಗೀತಾಂಜಲಿ ಪಿ.ಎ ಇವರ ನೇಮಕಾತಿಯನ್ನು ರದ್ದುಗೊಳಿಸುವಂತೆ ಮತ್ತು ಸದರಿ ಹುದ್ದೆಗೆದುರಾಗಿ ತಮ್ಮನ್ನು ನೇಮಕಗೊಳಿಸುವಂತೆ ಕೋರಿ ಡಾ. ಗೌತಮ್ ಎಸ್.ಎ ಇವರು ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಹೂಡಿದ ರಿಟ್ ಅರ್ಜಿ ಸಂಖ್ಯೆ: 1652/2015 (ಎಸ್–ಆರ್‌ಇಎಸ್) ಗೆ ಸಂಬಂಧಿಸಿದಂತೆ ದಿನಾಂಕ 24.11.2020 ರಂದು ಮಾನ್ಯ ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯವು ನೀಡಿರುವ ತೀರ್ಪಿನ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು ಸಾ.ಸ.8:37(2020)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಇತಿಹಾಸ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರ ನೇಮಕಾತಿ ಬಗ್ಗೆ

**ನಿರ್ಣಯ:** ಸ್ನಾತಕೋತ್ತರ ಇತಿಹಾಸ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರನ್ನು ನಿಯಮಾನುಸಾರ ನೇಮಕಾತಿ ಮಾಡುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲಾಯಿತು.

**ಇತರ ವಿಷಯಗಳು:**

1. ಸಿಂಡಿಕೇಟಿನ ಕಾರ್ಯಕಲಾಪಗಳಿಗೆ ಮೈಕ್ ವ್ಯವಸ್ಥೆ ಅಳವಡಿಸಲಾಗಿರುತ್ತದೆ. ಆದರೆ ಮಂಗಳೂರು

ವಿಶ್ವವಿದ್ಯಾನಿಲಯದ ಸಿಂಡಿಕೇಟು ಸಭಾಂಗಣವು Sound proof room ಅಲ್ಲದಿರುವುದರಿಂದ ಕಲಾಪಗಳಿಗೆ ತೊಂದರೆಯಾಗುತ್ತಿದೆ. ಆದುದರಿಂದ ಸಭಾಂಗಣಕ್ಕೆ ಸೂಕ್ತ Sound proof ವ್ಯವಸ್ಥೆಯನ್ನು ಮಾಡಲು ಕ್ರಮಕೈಗೊಳ್ಳುವಂತೆ ಸಿಂಡಿಕೇಟು ನಿರ್ಣಯಿಸಿತು.

2. ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವಿಭಾಗಗಳ ಪ್ರವೇಶಾತಿಗೊಂಡಿರುವ ವಿದ್ಯಾರ್ಥಿಗಳ ವರ್ಷಾವಾರು ವಿವರಗಳ ವಿಶ್ಲೇಷಣಾ ವರದಿಯನ್ನು ಮುಂದಿನ ಸಿಂಡಿಕೇಟು ಸಭೆಗೆ ಮಂಡಿಸಲು ಸೂಕ್ತ ಕ್ರಮಕೈಗೊಳ್ಳುವಂತೆ ಸಿಂಡಿಕೇಟು ನಿರ್ಣಯಿಸಿತು.

3. ಮಂಗಳೂರು ವಿಶ್ವವಿದ್ಯಾನಿಲಯದ ದೂರಶಿಕ್ಷಣ ಕಾರ್ಯಕ್ರಮದ ಮೂಲಕ ನಡೆಸದಿರುವ ಕಾರ್ಯಕ್ರಮಗಳನ್ನು ನಮೂದಿಸಿ ವಿಶ್ವವಿದ್ಯಾನಿಲಯದ ಹೆಸರಿನಲ್ಲಿ ನಕಲಿ ಅಂಕಪಟ್ಟಿಗಳನ್ನು ತಯಾರಿಸುತ್ತಿರುವ ವಿಷಯವು ಸಿಂಡಿಕೇಟು ಸದಸ್ಯರುಗಳ ಗಮನಕ್ಕೆ ಬಂದಿರುವುದನ್ನು ಸದಸ್ಯರು ಸಭೆಯಲ್ಲಿ ಪ್ರಸ್ತಾಪಿಸಿದರು. ಇದಕ್ಕೆ ಕುಲಸಚಿವರು (ಪರೀಕ್ಷಾಂಗ) ಇವರು ಸ್ಪಷ್ಟೀಕರಣ ನೀಡುತ್ತಾ, ಸದ್ರಿ ಅಂಕಪಟ್ಟಿಗಳ ಕೆಲವು ಮೂಲಪ್ರತಿಗಳು ತಮ್ಮ ಕಚೇರಿಯಲ್ಲಿಯೂ ಸ್ವೀಕೃತವಾಗಿರುತ್ತವೆ. ತಮ್ಮ ಕಚೇರಿಯಲ್ಲಿ ಸ್ವೀಕೃತವಾಗಿರುವ ಅಂಕಪಟ್ಟಿಗಳ ಕ್ರಮಸಂಖ್ಯೆ ಮತ್ತು ಭದ್ರತಾ ಲಕ್ಷಣಗಳನ್ನು (security features) ಪರಿಶೀಲಿಸಲಾಗಿದ್ದು, ಅವುಗಳು ವಿಶ್ವವಿದ್ಯಾನಿಲಯದಲ್ಲಿ ಪ್ರಿಂಟ್ ಮಾಡಿದ ಅಂಕಪಟ್ಟಿಗಳಲ್ಲ ಎಂದು ಖಾತ್ರಿ ಪಡಿಸಲಾಗಿರುವ ವಿಷಯವನ್ನು ಸಭೆಗೆ ತಿಳಿಸಿದರು. ಪ್ರಕರಣದ ಬಗ್ಗೆ ಸಂಪೂರ್ಣ ತನಿಖೆ ನಡೆಸುವಂತೆ ಮಾನ್ಯ ಕುಲಪತಿಗಳು ಆದೇಶಿಸಿರುವುದರಿಂದ ಈ ಬಗ್ಗೆ ಸೂಕ್ತ ಕ್ರಮಕೈಗೊಳ್ಳುವುದಾಗಿಯೂ ತಿಳಿಸಿದರು. ಮುಂದುವರಿದು, ಕುಶಾಲನಗರದಲ್ಲಿರುವ ಎಸ್.ಎಸ್.ಬಿ.ಟಿ. ಕೇಂದ್ರದ ಮೂಲಕ ನಡೆಯುತ್ತಿದ್ದ ದೂರಶಿಕ್ಷಣ ಕಾರ್ಯಕ್ರಮದ ವ್ಯವಹಾರಗಳ ಬಗ್ಗೆ ತನಿಖೆ ನಡೆಸುವಂತೆಯೂ ಸಿಂಡಿಕೇಟು ನಿರ್ಣಯಿಸಿತು.

4. ಮಂಗಳೂರು ವಿಶ್ವವಿದ್ಯಾನಿಲಯದಿಂದ ನಡೆಸಲಾಗುತ್ತಿರುವ add-on ಕೋರ್ಸುಗಳ ಬಗ್ಗೆ ಸಾರ್ವಜನಿಕರಿಗೆ ಅರಿವು/ಮಾಹಿತಿ ನೀಡಲು ಸೂಕ್ತ ಸಾಮಾಜಿಕ ಜಾಲತಾಣ ಅಥವಾ ಇನ್ನಿತರ ವಿಧಾನಗಳನ್ನು ಅನುಸರಿಸುವಂತೆ ಸಿಂಡಿಕೇಟು ನಿರ್ಣಯಿಸಿತು.

5. ಮಂಗಳೂರು ವಿಶ್ವವಿದ್ಯಾನಿಲಯದ ಅಧ್ಯಯನ ಪೀಠಗಳಿಗೆ ಸಂಬಂಧಿಸಿ ಈ ಕೆಳಗಿನ ನಿರ್ಣಯಗಳನ್ನು ಕೈಗೊಳ್ಳಲಾಯಿತು.
   a. ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಕವಿ ಮುದ್ದಣ ಅಧ್ಯಯನ ಪೀಠವನ್ನು ಸ್ಥಾಪಿಸುವ ಕಾರ್ಯವು ನಿಧಾನಗತಿಯಲ್ಲಿ ಸಾಗುತ್ತಿದ್ದು, ಈ ಸಂಬಂಧ ಕೂಡಲೇ ಸರ್ಕಾರಕ್ಕೆ ಪತ್ರ ಬರೆದು ಶೀಘ್ರವಾಗಿ ಕವಿ ಮುದ್ದಣ ಅಧ್ಯಯನ ಪೀಠವನ್ನು ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಸ್ಥಾಪಿಸಲು ಸೂಕ್ತ ಕ್ರಮಕೈಗೊಳ್ಳಬೇಕೆಂದು ಸಿಂಡಿಕೇಟು ನಿರ್ಣಯಿಸಿತು.
   b. ಅರೆಭಾಷೆ ಕನ್ನಡ, ಕುಂದಾಪುರ ಕನ್ನಡ ಭಾಷೆಗಳ ಅಧ್ಯಯನ ಪೀಠ ಮತ್ತು ರಾಷ್ಟ್ರಕವಿ ಕುವೆಂಪು ಅಧ್ಯಯನ ಪೀಠಗಳನ್ನು ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಸ್ಥಾಪಿಸಲು ಸೂಕ್ತ ಕ್ರಮಕೈಗೊಳ್ಳುವಂತೆ ಸಿಂಡಿಕೇಟು ನಿರ್ಣಯಿಸಿತು.
   c. ಪೀಠಗಳ ಸ್ಥಾಪನೆಗಳಿಗೆ ಸಂಬಂಧಿಸಿ, ಹಣಕಾಸಿನ ಅಭಾವವಿರುವ ವಿಷಯವನ್ನು ಕುಲಸಚಿವರು ಸಭೆಗೆ ತಿಳಿಸಿದರು. ಈ ಬಗ್ಗೆ ಚರ್ಚಿಸಲಾಗಿ ವಿಶ್ವವಿದ್ಯಾನಿಲಯದ ನಿರ್ದೇಶನದ ಮೇರೆಗೆ crowd source ಮೂಲಕ ಹಣ ಸಂಗ್ರಹಣೆ ಮಾಡಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

d. ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಸ್ಥಾಪನೆಯಾಗಿರುವ ಅಂಬೇಡ್ಕರ್ ಮತ್ತು ಗಾಂಧಿ ಅಧ್ಯಯನ ಪೀಠಗಳ ಮೂಲಕ ಯಾವುದೇ ಚಟುವಟಿಕೆಗಳು ನಡೆಯದೇ ಇರುವುದರಿಂದ ಸದರಿ ಪೀಠಗಳನ್ನು ಪುನರೂರ್ಜಿತಗೊಳಿಸಿ ಪೀಠಗಳಿಂದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಸೂಕ್ತ ಕ್ರಮಕೈಗೊಳ್ಳುವಂತೆ ಸಿಂಡಿಕೇಟು ನಿರ್ಣಯಿಸಿತು.

e. ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಸ್ಥಾಪನೆಯಾಗಿರುವ ರಾಣಿ ಅಬ್ಬಕ್ಕ ಅಧ್ಯಯನ ಪೀಠಕ್ಕೆ ಸರ್ಕಾರದಿಂದ ರೂಪಾಯಿ ಎರಡು ಕೋಟಿಯ ಅನುದಾನ ಮಂಜೂರಾಗಿದ್ದು, ಸದರಿ ಹಣವು ಬಿಡುಗಡೆಯಾಗದ ಮಾಹಿತಿಯು ಸಿಂಡಿಕೇಟಿಗೆ ಲಭಿಸಿದ್ದು, ಈ ಬಗ್ಗೆ ಸರ್ಕಾರಕ್ಕೆ ಪತ್ರ ಬರೆಯಲು ಕ್ರಮಕೈಗೊಳ್ಳುವಂತೆ ಸಿಂಡಿಕೇಟು ನಿರ್ಣಯಿಸಿತು.

f. ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಸ್ಥಾಪಿಸಲು ಉದ್ದೇಶಿಸಿರುವ ಕೊಡವ ಅಧ್ಯಯನ ಪೀಠಕ್ಕೆ ಕೊಡಗಿನ ದಾನಿಗಳಿಂದ ಹಣ ಸಂಗ್ರಹಣೆ ಮಾಡುವಂತೆ ಸಿಂಡಿಕೇಟು ಸದಸ್ಯರಾದ ಡಾ. ಪಾರ್ವತಿ ಅಪ್ಪಯ್ಯ ಇವರಿಗೆ ತಿಳಿಸಲಾಯಿತು.

6. ಮುಂದಿನ ಸಿಂಡಿಕೇಟು ಸಭೆಯ ದಿನದಂದು ಸಿಂಡಿಕೇಟು ಸಭೆ ಮುಗಿದ ಬಳಿಕ ಎಲ್ಲಾ ಸದಸ್ಯರೊಂದಿಗೆ ವಿಶ್ವವಿದ್ಯಾನಿಲಯದ ಕ್ಯಾಂಪಸ್‌ಗೆ ಭೇಟಿ ನೀಡಬಹುದೆಂಬುದಾಗಿ ನಿರ್ಣಯಿಸಲಾಯಿತು.

7. ಡಾ. ನಾಗಪ್ಪ ಗೌಡ ಆರ್., ಸಹ ಪ್ರಾಧ್ಯಾಪಕರು, ಸ್ನಾತಕೋತ್ತರ ಕನ್ನಡ ಅಧ್ಯಯನ ವಿಭಾಗ ಇವರನ್ನು ಸ್ನಾತಕೋತ್ತರ ಕೇಂದ್ರ, ಚಿಕ್ಕ ಅಳುವಾರ ಇಲ್ಲಿಗೆ ನಿಯೋಜನೆ ಮಾಡುವಂತೆ ಸದರಿಯವರು ಮಾಡಿಕೊಂಡಿರುವ ಮನವಿಯ ಮೇರೆಗೆ, ಪ್ರಸ್ತುತ ದೂರಶಿಕ್ಷಣ ಕೇಂದ್ರ, ಮಂಗಳೂರು ಇಲ್ಲಿನ ಲೋಪದೋಷಗಳ ಬಗ್ಗೆ ತನಿಖೆ ನಡೆಯುತ್ತಿದ್ದು, ಸದರಿಯವರ ಉಪಸ್ಥಿತಿ ತನಿಖಾ ಸಮಿತಿಗೆ ಅಗತ್ಯವಾಗಿರುತ್ತದೆ. ಆದುದರಿಂದ ತನಿಖಾ ಸಮಿತಿಯು ಸೂಚಿಸಿದ ದಿನಾಂಕಗಳಂದು ಡಾ. ನಾಗಪ್ಪ ಗೌಡ ಆರ್., ಇವರು ಸಭೆಗಳಿಗೆ ಹಾಜರಾಗುವ ಷರತ್ತಿನ ಮೇರೆಗೆ ಸ್ನಾತಕೋತ್ತರ ಕೇಂದ್ರ, ಚಿಕ್ಕ ಅಳುವಾರ ಇಲ್ಲಿಗೆ ನಿಯೋಜನೆ ಮಾಡಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು. ಆದರೆ ನ್ಯಾಕ್ ಸಮಿತಿಯು ವಿಶ್ವವಿದ್ಯಾನಿಲಯಕ್ಕೆ ಭೇಟಿ ನೀಡುವ ಸಂದರ್ಭದಲ್ಲಿ ಸದರಿಯವರು ಕಡ್ಡಾಯವಾಗಿ ಎಸ್.ವಿ.ಪಿ. ಕನ್ನಡ ಅಧ್ಯಯನ ಸಂಸ್ಥೆ, ಮಂಗಳೂರು ವಿಶ್ವವಿದ್ಯಾನಿಲಯ ಇಲ್ಲಿ ಕಾರ್ಯ ನಿರ್ವಹಿಸಲು ಸೂಚಿಸಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

8. ನ್ಯಾಕ್ ಸಂದರ್ಭದಲ್ಲಿ ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳು ಮತ್ತು ಕ್ಯಾಂಪಸ್‌ನ ಸ್ನಾತಕೋತ್ತರ ವಿಭಾಗಳಿಂದ ನಿಯೋಜನೆಗೊಂಡಿರುವ ಸಿಬ್ಬಂದಿಗಳು ಕಡ್ಡಾಯವಾಗಿ ತಮ್ಮ ಮಾತೃ ವಿಭಾಗಗಳಲ್ಲಿ ಕರ್ತವ್ಯ ನಿರ್ವಹಿಸಬೇಕೆಂದು ಸದರಿಯವರುಗಳಿಗೆ ಸೂಚನೆ ನೀಡಲು ಕ್ರಮಕೈಗೊಳ್ಳುವಂತೆ ಸಿಂಡಿಕೇಟು ನಿರ್ಣಯಿಸಿತು.

9. ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಆಡಿಟ್ ಆಕ್ಷೇಪಣೆಗಳು ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಆಂತರಿಕ ಲೆಕ್ಕಪರಿಶೋಧಕರ ಅಗತ್ಯವಿರುತ್ತದೆ. ಆದುದರಿಂದ ಶೀಘ್ರವಾಗಿ ಒಬ್ಬ ನುರಿತ ಲೆಕ್ಕಪರಿಶೋಧಕರನ್ನು ನೇಮಕಾತಿ ಮಾಡಲು ಸೂಕ್ತ ಕ್ರಮಕೈಗೊಳ್ಳಬೇಕೆಂದು ಸಿಂಡಿಕೇಟು ನಿರ್ಣಯಿಸಿತು. ಮುಂದುವರಿದು, ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಲೆಕ್ಕಪರಿಶೋಧಕರ ಯಾದಿಯನ್ನು ತಯಾರಿಸಲು ಸೂಕ್ತ ಕ್ರಮಕೈಗೊಳ್ಳುವಂತೆ ನಿರ್ಣಯಿಸಲಾಯಿತು.

10. ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಸೆಪ್ಟೆಂಬರ್/ಅಕ್ಟೋಬರ್ 2020ರಲ್ಲಿ ನಡೆದ ಪರೀಕ್ಷೆಗಳಿಗೆ ಸಂಬಂಧಿಸಿ,

ಇನ್ನೂ ಹಲವಾರು ವಿದ್ಯಾರ್ಥಿಗಳ ಫಲಿತಾಂಶಗಳನ್ನು ಪ್ರಕಟಿಸಿರುವುದಿಲ್ಲ. ಈ ಬಗ್ಗೆ ಕುಲಸಚಿವರು(ಪರೀಕ್ಷಾಂಗ) ಇವರೊಂದಿಗೆ ಸ್ಪಷ್ಟೀಕರಣ ಕೇಳಲಾಗಿ ಪ್ರಕಟಣೆಗೆ ಬಾಕಿ ಉಳಿದಿರುವ ಫಲಿತಾಂಶಗಳನ್ನು ಶೀಘ್ರವಾಗಿ ಪ್ರಕಟಿಸಲಾಗುವುದೆಂದು ಸಭೆಗೆ ತಿಳಿಸಿದರು.

11. ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಪ್ರಸ್ತುತ ಪರೀಕ್ಷಾ ಕಾರ್ಯಗಳನ್ನು ಹೊರಗುತ್ತಿಗೆ ಮೂಲಕ ನಡೆಸುತ್ತಿರುವ ಮೆ. ಆ್ಯಟ್ರಿಸ್ ಕಂಪನಿ, ಬೆಂಗಳೂರು ಇವರೊಂದಿಗಿನ ಒಡಂಬಡಿಕೆಯು ಕೊನೆಯ ಹಂತಕ್ಕೆ ಬಂದಿರುವುದರಿಂದ ವಿಶ್ವವಿದ್ಯಾನಿಲಯದ 39ನೇ ವಾರ್ಷಿಕ ಘಟಿಕೋತ್ಸವದವರೆಗೆ ಮಾತ್ರ ಸದರಿಯವರನ್ನು ಮುಂದುವರಿಸಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು. ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಪರೀಕ್ಷಾ ಕಾರ್ಯದ ಗಣಕೀಕರಣವನ್ನು 2010ರಲ್ಲಿ ಪ್ರಾರಂಭಿಸಲಾಗಿದ್ದು, ಆ ಸಂದರ್ಭದಲ್ಲಿ ಹೊರಗುತ್ತಿಗೆ ಮೂಲಕ ಕಾರ್ಯ ನಿರ್ವಹಿಸುತ್ತಿದ್ದ ಮೆ. Meta-I ಕಂಪನಿಯವರು 2015ರವರೆಗೆ ನೀಡಿರುವ ಡಾಟಾವನ್ನು ಮೆ. ಆ್ಯಟ್ರಿಸ್ ಕಂಪನಿ, ಬೆಂಗಳೂರು ಇವರಿಗೆ ನೀಡಲಾಗಿದ್ದು, ಸದರಿಯವರು ಪ್ರಸ್ತುತ 10ವರ್ಷಗಳ ಡಾಟಾವನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಬೇಕಾಗಿರುತ್ತದೆ. ಆದುದರಿಂದ 2010ರಿಂದ 2019ರವರೆಗಿನ 9 ವರ್ಷಗಳ ಡಾಟಾವನ್ನು ಶೀಘ್ರದಲ್ಲಿ ಮೆ. ಆ್ಯಟ್ರಿಸ್ ಕಂಪನಿ, ಬೆಂಗಳೂರು ಇವರಿಂದ ಪಡೆಯಲು ಸೂಕ್ತ ಕ್ರಮಕೈಗೊಳ್ಳುವಂತೆ ಸಿಂಡಿಕೇಟು ಕುಲಸಚಿವರು (ಪರೀಕ್ಷಾಂಗ) ಇವರಿಗೆ ಸೂಚಿಸಿತು. ಮುಂದುವರಿದು, ಸ್ಥಿತಿಗತಿಯ ವಿವರಗಳನ್ನು ಮುಂದಿನ ಸಿಂಡಿಕೇಟು ಸಭೆಗೆ ಮಂಡಿಸಲು ಕುಲಸಚಿವರು (ಪರೀಕ್ಷಾಂಗ) ಇವರಿಗೆ ಸೂಚಿಸಲಾಯಿತು.

12. ವಿಶ್ವವಿದ್ಯಾನಿಲಯದಲ್ಲಿ ಅಳವಡಿಸಲಾಗಿರುವ ಸೋಲಾರ್ ಉಪಕರಣಗಳ AMCಯು ಜನವರಿ 2021ಕ್ಕೆ ಕೊನೆಗೊಳ್ಳಲಿದ್ದು, ಈಗಾಗಲೇ ಅವರಿಗೆ ಲಕ್ಷಾಂತರ ರೂಪಾಯಿಗಳನ್ನು ಪಾವತಿ ಮಾಡಲಾಗಿರುತ್ತದೆ. ಆದುದರಿಂದ ಸದರಿ ಉಪಕರಣಗಳನ್ನು ಸೂಕ್ತ ರೀತಿಯಲ್ಲಿ ಉಪಯೋಗಿಸಿಕೊಂಡು ವಿಶ್ವವಿದ್ಯಾನಿಲಯದ ಆರ್ಥಿಕ ಸಂಪತ್ತು ಕಾಪಾಡುವ ನಿಟ್ಟಿನಲ್ಲಿ ಸೂಕ್ತ ಕ್ರಮ ಕೈಗೊಳ್ಳುವಂತೆ ಸಿಂಡಿಕೇಟು ನಿರ್ಣಯಿಸಿತು. ಈ ಬಗ್ಗೆ ಸ್ಥಿತಿಗತಿಯ (Status Report) ವಿವರಗಳನ್ನು ಮುಂದಿನ ಸಭೆಗೆ ಮಂಡಿಸಲು ಸೂಕ್ತ ಕ್ರಮಗೈಗೊಳ್ಳಬೇಕೆಂದು ಸಿಂಡಿಕೇಟು ನಿರ್ಣಯಿಸಿತು.

13. ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ RUSA ಯೋಜನೆಯಡಿಯಲ್ಲಿ ಮಳೆನೀರು ಸಂಗ್ರಹಣೆ ಕಾಮಗಾರಿಗೆ ಬಿಡುಗಡೆಯಾದ ಮೊತ್ತ ರೂಪಾಯಿ 60 ಲಕ್ಷದಲ್ಲಿ ಎರಡು ಕಾಮಗಾರಿಗಳನ್ನು ಟೆಂಡರ್ ಮಾಡಿದ್ದು, ಒಟ್ಟು ರೂ. 44,99,629.00 (ರೂಪಾಯಿ ನಲವತ್ತನಾಲ್ಕು ಲಕ್ಷದ ತೊಂಬತೊಂಬತ್ತು ಸಾವಿರದ ಆರು ನೂರ ಇಪ್ಪತ್ತೊಂಬತ್ತು ಮಾತ್ರ)ಗೆ ಟೆಂಡರ್ ಅಂತಿಮವಾಗಿರುತ್ತದೆ. ಇದರ ಹೊರತಾಗಿ ಉಳಿದ ಮೊತ್ತ ರೂ. 15,00,371.00 (ರೂಪಾಯಿ ಹದಿನೈದು ಲಕ್ಷದ ಮುನ್ನೂರ ಎಪ್ಪತ್ತೊಂದು ಮಾತ್ರ) ದಲ್ಲಿ ವಿಶ್ವವಿದ್ಯಾನಿಲಯದ ಡಾ. ಪಿ. ದಯಾನಂದ ಪೈ ಮತ್ತು ಶ್ರೀ ಪಿ. ಸತೀಶ್ ಪೈ ಯಕ್ಷಗಾನ ಅಧ್ಯಯನ ಕೇಂದ್ರದ ಪಕ್ಕದಲ್ಲಿ ಹೆಚ್ಚುವರಿಯಾಗಿ ಮಳೆನೀರು ಸಂಗ್ರಹಣೆ ಕಾಮಗಾರಿಯನ್ನು ನಿರ್ಮಿತಿ ಕೇಂದ್ರ, ಮಂಗಳೂರು ಇವರ ಮೂಲಕ ಕಾರ್ಯಗತಗೊಳಿಸುವ ಪ್ರಸ್ತಾವನೆಗೆ ಸಿಂಡಿಕೇಟು ಸರ್ವಾನುಮತದಿಂದ ಅನುಮೋದನೆ ನೀಡಿತು.

14. ವಿಶ್ವವಿದ್ಯಾನಿಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕಂಪ್ಯೂಟರ್ ಆಪರೇಟರ್, ಡಾಟಾ ಎಂಟ್ರಿ ಆಪರೇಟರ್‌ಗಳ pay scale ಗಳನ್ನು ಸರ್ಕಾರದ ನಿರ್ದೇಶನದ ನಂತರವೂ ನಿಗದಿಗೊಳಿಸುವಲ್ಲಿ ವಿಳಂಬವಾಗಿರುವ ವಿಷಯವು ಸಿಂಡಿಕೇಟು ಸದಸ್ಯರ ಗಮನಕ್ಕೆ ಬಂದಿರುವುದರಿಂದ ಸದರಿ ವಿಷಯದ ಬಗ್ಗೆ ಸಭೆಯಲ್ಲಿ ಪ್ರಸ್ತಾಪಿಸಲಾಗಿ ಈ ಬಗ್ಗೆ ಸೂಕ್ತ ಕ್ರಮಕೈಗೊಳ್ಳುವಂತೆ ಸಿಂಡಿಕೇಟು ನಿರ್ಣಯಿಸಿತು.

15. ಮಂಗಳೂರು ವಿಶ್ವವಿದ್ಯಾನಿಲಯದ ಕುಲಪತಿಗಳ ಕಚೇರಿಯಲ್ಲಿ consultant ಆಗಿ ಕಾರ್ಯ ನಿರ್ವಹಿಸುತ್ತಿರುವ ಶ್ರೀ ಗುರುರಾಜ್ ಇವರನ್ನು ತಕ್ಷಣವೇ ವಿಶ್ವವಿದ್ಯಾನಿಲಯದ ಸೇವೆಯಿಂದ ಬಿಡುಗಡೆಗೊಳಿಸಬೇಕಾಗಿ ಸಿಂಡಿಕೇಟು ನಿರ್ಣಯಿಸಿತು.

16. ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಂಬಂಧಿಸಿ, ಬೆಂಗಳೂರಿನಲ್ಲಿರುವ ಸರ್ಕಾರಿ ಕಛೇರಿಗಳಿಗೆ ಸಂಬಂಧಿಸಿದ ಪತ್ರ ವ್ಯವಹಾರಗಳು ನಿಧಾನಗತಿಯಲ್ಲಿ ಸಾಗುತ್ತಿದ್ದು, ಮಂಗಳೂರು ವಿಶ್ವವಿದ್ಯಾನಿಲಯದಿಂದ ಬೆಂಗಳೂರಿನ ಸರ್ಕಾರಿ ಕಚೇರಿಗಳಿಗೆ ಸಂಬಂಧಿಸಿದ ಪತ್ರ ವ್ಯವಹಾರಗಳನ್ನು ನೋಡಿಕೊಳ್ಳಲು ಬೆಂಗಳೂರಿನಲ್ಲಿ ಒಬ್ಬ ಸೂಕ್ತ Liaison Officer ನ್ನು ನಿಯೋಜಿಸುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಸಿಂಡಿಕೇಟು ನಿರ್ಣಯಿಸಿತು.

ಮಾನ್ಯ ಕುಲಪತಿಗಳು ಸದಸ್ಯರ ಸಲಹೆ ಸಹಕಾರಗಳಿಗೆ ಧನ್ಯವಾದಗಳನ್ನು ಅರ್ಪಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

ಸಹಿ/–
ಕುಲಸಚಿವರು

ಸಹಿ/–
ಕುಲಪತಿಗಳು.